**India Radio: Bangalore**
**National Bulletins In Kannada**
**17.06.2025 / 19.35 hrs**

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**<><*<><>*><>**

ಮುಖ್ಯಾಂಶಗಳು

೧. ಸತತ ಏಳನೇ ಬಾರಿಗೆ ಜಿ-೭ ಶೃಂಗಸಭೆಯಲ್ಲಿಂದು ಪ್ರಧಾನಿ ಭಾಗಿ; ಇಂಧನ ಭದ್ರತೆ, ತಂತ್ರಜ್ಞಾನ ಕುರಿತು ಚರ್ಚೆ

೨. ನಾಳೆಯಿಂದ ಭಾರತ- ಫ್ರಾನ್ಸ್ ೮ನೇ ಆವೃತ್ತಿಯ ಶಕ್ತಿ ಜಂಟಿ ಸಮರಾಭ್ಯಾಸ

೩. ಐದನೇ ದಿನಕ್ಕೆ ಕಾಲಿಟ್ಟ ಇಸ್ರೇಲ್ -ಇರಾನ್ ಸಂಘರ್ಷ; ಉಭಯ ದೇಶಗಳ ನಾಗರಿಕರಲ್ಲಿ ಹೆಚ್ಚಿದ ಆತಂಕ

೪. ಐಸಿಸಿ ಮಹಿಳಾ ಏಕದಿನ ಬ್ಯಾಟಿಂಗ್ ಶ್ರೇಯಾಂಕದಲ್ಲಿ ಅಗ್ರ ಸ್ಥಾನಕ್ಕೇರಿದ ಭಾರತದ ಸ್ಮೃತಿ ಮಂದಾನಾ

**<><*<><>*><>**

ಪ್ರಧಾನಿ ನರೇಂದ್ರ ಮೋದಿ ಕೆನಡಾದ ಕನನಾಸ್ಕಿರ್ಸ್‌ನಲ್ಲಿ ಇಂದು ನಡೆಯಲಿರುವ ಜಿ-೭ ಶೃಂಗಸಭೆಯಲ್ಲಿ ಪಾಲ್ಗೊಳ್ಳಲಿದ್ದಾರೆ. ಶೃಂಗಸಭೆಯಲ್ಲಿ ಬದಲಾಗುತ್ತಿರುವ ಜಗತ್ತಿನಲ್ಲಿ ಪ್ರವೇಶ ಮತ್ತು ಕೈಗೆಟಕುವಿಕೆಯನ್ನು ಖಾತರಿಪಡಿಸಲು, ಇಂಧನ ಭದ್ರತೆ, ತಂತ್ರಜ್ಞಾನ, ಮೂಲಸೌಕರ್ಯ ಮತ್ತು ಹೂಡಿಕೆಯ ಭವಿಷ್ಯದ ಕುರಿತು ಚರ್ಚೆಗಳು ನಡೆಯಲಿವೆ. ಇದು ಪ್ರಧಾನಿಯವರ ಸತತ ೬ನೇ ಜಿ-೭ ಶೃಂಗಸಭೆಯಾಗಿದೆ. ಇಂದು ಬೆಳಗ್ಗೆ ಕೆನಡಾದ ಕ್ಯಾಲ್ಗರಿ ತಲುಪಿದ ಪ್ರಧಾನಿ ನರೇಂದ್ರ ಮೋದಿ ಅವರಿಗೆ ವಿಮಾನ ನಿಲ್ದಾಣದಲ್ಲಿ ಆತ್ಮೀಯ ಸ್ವಾಗತ ನೀಡಲಾಯಿತು. ಕೆನಡಾದ ಪ್ರಧಾನಿ ಮಾರ್ಕ್‌ಕಾರ್ನಿ ಅವರ ಆಹ್ವಾನದ ಮೇರೆಗೆ ಕೆನಡಾಕ್ಕೆ ಎರಡು ದಿನಗಳ ಭೇಟಿಯ ಸಮಯದಲ್ಲಿ, ಪ್ರಧಾನಿ ಮೋದಿ ಅವರು ಶೃಂಗಸಭೆಯ ಹೊರತಾಗಿ ಹಲವಾರು ದ್ವಿಪಕ್ಷೀಯ ಸಭೆಗಳನ್ನು ನಡೆಸಲಿದ್ದಾರೆ. ಜಿ-೭ ದೇಶಗಳ ನಾಯಕರು, ಇತರೆ ಆಹ್ವಾನಿತ ರಾಷ್ಟ್ರಗಳು ಮತ್ತು ಅಂತಾರಾಷ್ಟ್ರೀಯ ಸಂಸ್ಥೆಗಳ ಮುಖ್ಯಸ್ಥರೊಂದಿಗೆ ನಿರ್ಣಾಯಕ ಜಾಗತಿಕ ವಿಷಯಗಳ ಕುರಿತು ಪ್ರಧಾನಿ ನರೇಂದ್ರ ಮೋದಿ ಅವರು ಅಭಿಪ್ರಾಯಗಳನ್ನು ವಿನಿಮಯ ಮಾಡಿಕೊಳ್ಳಲಿದ್ದಾರೆ. ಇಂಧನ ಭದ್ರತೆ, ತಂತ್ರಜ್ಞಾನ ಮತ್ತು ನಾವೀನ್ಯತೆ, ವಿಶೇಷವಾಗಿ ಎಐ ಮತ್ತು ಕ್ವಾಂಟಮ್-ಸಂಬಂಧಿತ ಸಮಸ್ಯೆಗಳಿಗೆ ಸೇರಿದ ವಿಷಯಗಳು ಇದರಲ್ಲಿ ಸೇರಿವೆ. ದಶಕದ ನಂತರ ಪ್ರಧಾನಿ ಮೋದಿ ಅವರು ಕೆನಡಾಕ್ಕೆ ನೀಡುತ್ತಿರುವ ಮೊದಲ ಭೇಟಿ ಇದಾಗಿದೆ.

**<><*<><>*><>**

ಫ್ರಾನ್ಸ್‌ನ ಲಾ ಕ್ಯಾವಲೆರಿಯ ಕ್ಯಾಂಪ್ ಲಾರ್ಜಾಕ್‌ನಲ್ಲಿ ನಾಳೆಯಿಂದ ಮುಂದಿನ ತಿಂಗಳ ೧ ರವರೆಗೆ ನಡೆಯಲಿರುವ ದ್ವೈವಾರ್ಷಿಕ ದೇಶಗಳ ಜಂಟಿ ಸೇನಾ ಸಮರಾಭ್ಯಾಸ ಶಕ್ತಿಯ ೮ನೇ ಆವೃತ್ತಿಯಲ್ಲಿ ಭಾರತ ಮತ್ತು ಫ್ರೆಂಚ್ ರಾಷ್ಟ್ರಗಳು, ತೊಡಗಿಸಿಕೊಳ್ಳಲಿವೆ. ೯೦ ಸಿಬ್ಬಂದಿಯ ಭಾರತೀಯ ತುಕಡಿಯನ್ನು ಪ್ರಾಥಮಿಕವಾಗಿ ಜಮ್ಮು ಮತ್ತು ಕಾಶ್ಮೀರ ರೈಫಲ್ಸ್‌ನ ಬೆಟಾಲಿಯನ್ ಪ್ರತಿನಿಧಿಸುತ್ತಿದೆ. ೯೦ ಸಿಬ್ಬಂದಿಯ ಫ್ರೆಂಚ್ ತುಕಡಿಯನ್ನು ೧೩ ನೇ ವಿದೇಶಿ ಲೀಜನ್ ಹಾಫ್-ಬ್ರಿಗೇಡ್‌ನ ಸಿಬ್ಬಂದಿ ಪ್ರತಿನಿಧಿಸಲಿದ್ದಾರೆ. ಸಮರಾಭ್ಯಾಸ ಶಕ್ತಿ, ಭಾರತ ಮತ್ತು ಫ್ರೆಂಚ್ ಸೇನೆಗಳ ನಡುವಿನ ದ್ವೈವಾರ್ಷಿಕ

ತರಬೇತಿ ಕಾರ್ಯಕ್ರಮವಾಗಿದ್ದು, ಪರಸ್ಪರ ಕಾರ್ಯಸಾಧ್ಯತೆ, ಕಾರ್ಯಾಚರಣೆಯ ಸಮನ್ವಯ ಮತ್ತು ಮಿಲಿಟರಿಯಿಂದ ಮಿಲಿಟರಿ ಸಂಪರ್ಕವನ್ನು ಹೆಚ್ಚಿಸುವ ಗುರಿಯನ್ನು ಹೊಂದಿದೆ. ಈ ಆವೃತ್ತಿಯು ಅರೆ-ನಗರ ಭೂಪ್ರದೇಶದಲ್ಲಿ ಉಪ-ಸಾಂಪ್ರದಾಯಿಕ ಪರಿಸರದಲ್ಲಿ ಜಂಟಿ ಕಾರ್ಯಾಚರಣೆಗಳ ಮೇಲೆ ಕೇಂದ್ರೀಕರಿಸುತ್ತದೆ. ರಕ್ಷಣಾ ಸಚಿವಾಲಯದ ಪ್ರಕಾರ, ಶಕ್ತಿ ಭಾರತ ಮತ್ತು ಫ್ರಾನ್ಸ್ ನಡುವೆ ಬೆಳೆಯುತ್ತಿರುವ ರಕ್ಷಣಾ ಸಹಕಾರವನ್ನು ಒತ್ತಿಹೇಳುತ್ತದೆ ಮತ್ತು ಎರಡು ಮಿತ್ರರಾಷ್ಟ್ರಗಳ ನಡುವಿನ ಕಾರ್ಯತಂತ್ರದ ಸಂಬಂಧಗಳನ್ನು ಬಲಪಡಿಸುತ್ತದೆ.

**<><*<><>*><>**

ಕಳೆದ ಒಂದು ದಶಕದಲ್ಲಿ ಭಾರತ ಸರ್ವತೋಮುಖವಾಗಿ ಗಮನಾರ್ಹ ಬದಲಾವಣೆಯನ್ನು ಕಂಡಿದ್ದು, ಸೇವೆ, ಸುಶಾಸನ ಮತ್ತು ಬಡವರ ಕಲ್ಯಾಣದ ತತ್ವದಡಿ ಮುನ್ನಡೆಯುತ್ತಿದೆ. ಕೇಂದ್ರ ಸರ್ಕಾರ ಕಳೆದ ೧೧ ವರ್ಷಗಳಲ್ಲಿ ಕೈಗೊಂಡಿರುವ ಹಲವು ಪ್ರಮುಖ ಪ್ರಯತ್ನಗಳ ಕುರಿತು ಆಕಾಶವಾಣಿ ಸುದ್ದಿ ವಿಭಾಗ ವಿಶೇಷ ವರದಿಯನ್ನು ಪ್ರಸಾರ ಮಾಡುತ್ತಿದೆ. ಈ ಮಾಲಿಕೆಯಲ್ಲಿ ಇಂದು, ಎಲ್ಲರಿಗೂ ಕೈಗೆಟಕುವ ಆರೋಗ್ಯ ಸೇವೆಗಳ ಕುರಿತ ಒಂದು ವರದಿ ಇಲ್ಲಿದೆ.

ವರದಿ.

ಕಳೆದ ದಶಕದಲ್ಲಿ ಭಾರತದ ಆರೋಗ್ಯ ವಲಯ ಅಭೂತಪೂರ್ವ ಬದಲಾವಣೆಗೆ ಸಾಕ್ಷಿಯಾಗಿದೆ. 'ಆಯುಷ್ಮಾನ್ ಭಾರತ್' ಸೇರಿದಂತೆ ಹಲವು ಯೋಜನೆಗಳು ಸುಮಾರು ೫೫ ಕೋಟಿ ಜನರಿಗೆ ಆರ್ಥಿಕ ರಕ್ಷಣೆ ನೀಡುವಲ್ಲಿ ಯಶಸ್ವಿಯಾಗಿದೆ. 'ಆಯುಷ್ಮಾನ್ ವಯವಂದನಾ' ಯೋಜನೆಯಡಿ ಆರೋಗ್ಯ ಖಾತ್ರಿ ಸೌಲಭ್ಯಗಳನ್ನು ೭೦ ಹಾಗೂ ೭೦ ಕ್ಕಿಂತ ಮೇಲ್ಪಟ್ಟ ಹಿರಿಯ ನಾಗರಿಕರಿಗೂ ವಿಸ್ತರಿಸಲಾಗಿದೆ. 'ಆಯುಷ್ಮಾನ್ ಭಾರತ್ ಡಿಜಿಟಲ್ ಮಿಷನ್' ಅಡಿಯಲ್ಲಿ ೭೯ ಕೋಟಿ ಆರೋಗ್ಯ ಖಾತೆ ಆಭಾ ಗಳನ್ನು ನಿರ್ಮಿಸಲಾಗಿದ್ದು, ಆರೋಗ್ಯ ದಾಖಲೆಗಳಿಗೆ ಸುಲಭ ಪ್ರವೇಶ ದೊರಕಿಸಿವೆ. 'ಪ್ರಧಾನಮಂತ್ರಿ ಆಯುಷ್ಮಾನ್ ಭಾರತ್ ಆರೋಗ್ಯ ಮೂಲಸೌಕರ್ಯ ಮಿಷನ್' -ಪಿಎಂ ಅಭಿಮ್ ಅಡಿಯಲ್ಲಿ ದೇಶದ ಆರೋಗ್ಯ ಮೂಲಸೌಕರ್ಯ ವೇಗವಾಗಿ ವಿಸ್ತಾರಗೊಂಡಿದೆ. ವಿವಿಧ ರಾಜ್ಯಗಳಲ್ಲಿ ಏಮ್ಸ್ ಸಂಸ್ಥೆಗಳ ಸ್ಥಾಪನೆ ಹಾಗೂ ವಿಸ್ತರಣೆ ಕೈಗೊಳ್ಳಲಾಗಿದೆ. ಈ ಪೈಕಿ ಅಸ್ಸಾಂನಲ್ಲಿ ಈಶಾನ್ಯ ಭಾರತದ ಮೊಟ್ಟಮೊದ ಏಮ್ಸ್ ಸ್ಥಾಪನೆಯಾಗಿರುವುದು, ಸ್ಥಳೀಯ ವೈದ್ಯಕೀಯ ಶಿಕ್ಷಣಕ್ಕೆ ಕೇಂದ್ರ ಸರ್ಕಾರ ನೀಡುತ್ತಿರುವ ಆದ್ಯತೆ ಪ್ರತಿಬಿಂಬವಾಗಿದೆ.  ಕೋವಿಡ್ ೧೯ರ ಸಮಯದಲ್ಲೂ ಭಾರತ ತ್ವರಿತ ಮತ್ತು ದಿಟ್ಟ ಕ್ರಮಗಳನ್ನು ಕೈಗೊಂಡಿದೆ. ಲಸಿಕಾ ಕಾರ್ಯಪಡೆ ರಚನೆ, ಮುಖಗವಸು ಸಲಹೆಗಳು, ವಿಮಾನ ನಿಲ್ದಾಣಗಳಲ್ಲಿ ತಪಾಸಣೆ ಮತ್ತು ದೇಶಾದ್ಯಂತ ಲಾಕ್‌ಡೌನ್ ಘೋಷಣೆ ಸೇರಿದಂತೆ ಇತರ ಪ್ರಮುಖ ನಿರ್ಧಾರಗಳ ಮೂಲಕ ಆರೋಗ್ಯ ಸುರಕ್ಷತೆಗೆ ಬಲ ನೀಡಲಾಯಿತು. ಕೋವಿನ್ ವೇದಿಕೆ ಮೂಲಕ ೨೨೦ ಕೋಟಿ ಲಸಿಕೆ ಡೋಸ್‌ಗಳನ್ನು ಸಮರ್ಪಕವಾಗಿ ವಿತರಿಸಲಾಯಿತು. ರಾಷ್ಟ್ರೀಯ ದೂರ ಸಂರಕ್ಷಣಾ ಸೇವೆ- ಇ-ಸಂಜೀವಿನಿಯ ಮೂಲಕ ತಜ್ಞರ ಸಲಹೆ ವ್ಯವಸ್ಥೆಯನ್ನು ಸಕ್ರಿಯಗೊಳಿಸಿ ಲಕ್ಷಾಂತರ ಜನರ ಮನೆ ಬಾಗಿಲಿಗೆ ವೈದ್ಯಕೀಯ ಸಲಹೆಗಳನ್ನು ಒದಗಿಸಲಾಗಿದೆ. ಎಲ್ಲರಿಗೂ ಆರೋಗ್ಯ ಎಂಬ ದೃಷ್ಟಿಕೋನದೊಂದಿಗೆ ಕಳೆದ ಹನ್ನೊಂದು ವರ್ಷಗಳಲ್ಲಿ ಭಾರತದ ಆರೋಗ್ಯ ಸೇವಾ ವಲಯ ಸಮಗ್ರ ಬದಲಾವಣೆ ಕಂಡಿದೆ. ಸರ್ಕಾರ ಆರೋಗ್ಯ ಕ್ಷೇತ್ರದ ಪ್ರವೇಶವನ್ನು ವಿಸ್ತರಿಸಿದ್ದು, ಗುಣಮಟ್ಟವನ್ನು ಸುಧಾರಿಸುವ ಜೊತೆಗೆ ವೆಚ್ಚವನ್ನು ಕಡಿತಗೊಳಿಸಲಾಗಿದೆ.

**<><*<><>*><>**

ಇಸ್ರೇಲ್-ಇರಾನ್ ನಡುವಿನ ಸಂಘರ್ಷ ಐದನೇ ದಿನಕ್ಕೆ ಕಾಲಿಟ್ಟಿದ್ದು, ಇಸ್ರೇಲ್‌ನ ಟೆಲ್ ಅವಿವ್ ಮತ್ತು ಜರುಸಲೆಂ ನಲ್ಲಿ ಬಾಂಬ್ ಸ್ಫೋಟಗಳು ಸಂಭವಿಸಿವೆ. ಇರಾನ್ ಪುನಃ ದಾಳಿಯನ್ನು ಆರಂಭಿಸಿದೆ ಎಂದು ಇಸ್ರೇಲ್ ತಿಳಿಸಿದೆ. ಇಸ್ರೇಲ್ ದಾಳಿಗಳಿಗೆ ಪ್ರತಿಯಾಗಿ ಇರಾನ್ ಎರಡು ಸುತ್ತಿನ ಕ್ಷಿಪಣಿ ದಾಳಿ ನಡೆಸಿದ್ದು, ಮಧ್ಯ ಮತ್ತು ಉತ್ತರ ಇಸ್ರೇಲ್‌ನಲ್ಲಿ ವಾಯು ದಾಳಿ ಎಚ್ಚರಿಕೆ ಪರಿಸ್ಥಿತಿ ಮುಂದುವರಿದಿದೆ. ಈ ನಡುವೆ ಇಸ್ರೇಲ್ ಭೂಪ್ರದೇಶದ ಮೇಲೆ ಈವರೆಗಿನ ಅತಿ ದೊಡ್ಡ ಹಾಗೂ ತೀವ್ರತರದ ಕ್ಷಿಪಣಿ ದಾಳಿ ನಡೆಸಲು ಸಿದ್ಧತೆಗಳು ನಡೆಯುತ್ತಿವೆ ಎಂದು ಇರಾನ್ ಮಾಧ್ಯಮವೊಂದು ವರದಿ ಮಾಡಿದೆ. ಮುಂದಿನ ಸುತ್ತಿನ ದಾಳಿಯನ್ನು ಹೊಸ ಮತ್ತು ಅತ್ಯಾಧುನಿಕ ಶಸ್ತ್ರಾಸ್ತ್ರಗಳ ಮೂಲಕ ನಡೆಸಲಾಗುವುದು ಎಂದು ಇರಾನ್, ಇಸ್ರೇಲ್‌ಗೆ ಎಚ್ಚರಿಕೆ ನೀಡಿದೆ. ಮತ್ತೊಂದೆಡೆ ಪಶ್ಚಿಮ ಇರಾನ್‌ನ ಮಿಲಿಟರಿ ತಾಣಗಳ ಮೇಲೆ ಹಲವು ದಾಳಿಗಳನ್ನು ನಡೆಸಲಾಗಿದೆ. ಇರಾನ್‌ನ ಯುದ್ಧ ಕಾಲಿನ ಸಿಬ್ಬಂದಿ ಮುಖ್ಯಸ್ಥ ಅಲಿಶಾದ್ಮಾನಿ ಹತ್ಯೆಗೈಯುವಲ್ಲಿ ಯಶಸ್ವಿಯಾಗಿದ್ದೇವೆ ಎಂದು ಇಸ್ರೇಲ್ ಸೇನೆ ಹೇಳಿಕೊಂಡಿದೆ. ಇರಾನ್‌ನಲ್ಲಿ ಸಂಘರ್ಷ ಆರಂಭವಾದಗಿನಿಂದ ಕನಿಷ್ಠ ೨೨೪ ಮಂದಿ ಮೃತಪಟ್ಟಿದ್ದಾರೆ. ಇದೇ ವೇಳೆ ಇಸ್ರೇಲ್‌ನಲ್ಲಿ ೨೪ ಮಂದಿ ಸಾವನಪ್ಪಿದ್ದಾರೆ. ಸಂಘರ್ಷಕ್ಕೆ ಸಂಬಂದಪಟ್ಟಂತೆ ಹೇಳಿಕೆ ನೀಡಿರುವ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಇರಾನ್ ಹಾಗೂ ಇಸ್ರೇಲ್ ನಡುವೆ ಕದನ ವಿರಾಮಕ್ಕಿಂತ ಹೆಚ್ಚಿದ್ದನ್ನು ತಾವು ಅಪೇಕ್ಷಿಸುತ್ತಿದ್ದೇವೆ. ಈ ಬಾರಿ ಸಂಘರ್ಷವನ್ನು ನಿಜವಾಗಿಯೂ ಕೊನೆಗಾಣಿಸಲು ಬಯಸುತ್ತೇವೆ ಎಂದು ಹೇಳಿದ್ದಾರೆ. ಈ ನಡುವೆ ಅಮೆರಿಕ ರಕ್ಷಣಾ ಕಾರ್ಯದರ್ಶಿ ಪೀಟ್ ಹೆಗ್‌ಸೆತ್, ಮಧ್ಯಪ್ರಾಚ್ಯ ಪ್ರದೇಶದಲ್ಲಿ ಹೆಚ್ಚುವರಿ ರಕ್ಷಣಾ ಪಡೆಗಳನ್ನು ನಿಯೋಜಿಸಲು ಆದೇಶಿಸಿದ್ದಾರೆ. ಏತನ್ಮಧ್ಯೆ, ಅಮೆರಿಕ ಅಧ್ಯಕ್ಷರ ಹೇಳಿಕೆ, ಸಂಘರ್ಷವನ್ನು ಮತ್ತೆ ಹೆಚ್ಚಿಸುವಂತೆ ಇವೆ ಎಂದು ಚೀನಾ ಆರೋಪಿಸಿದೆ. ಇದಕ್ಕೂ ಮುನ್ನ ಅಧ್ಯಕ್ಷ ಟ್ರಂಪ್, ಇರಾನ್ ರಾಜಧಾನಿ ತೆಹರಾನ್‌ನಲ್ಲಿರುವ ನಿವಾಸಿಗಳಿಗೆ ತಕ್ಷಣವೇ ಸ್ಥಳಾಂತರಗೊಳ್ಳುವಂತೆ ಎಚ್ಚರಿಕೆ ನೀಡಿದ್ದ ಹಿನ್ನಲೆ ಚೀನಾ ಈ ಆರೋಪ ಮಾಡಿದೆ.

**<><*<><>*><>**

ದಕ್ಷಿಣ ಗಾಜಾದ ಪರಿಹಾರ ವಿತರಣಾ ತಾಣದ ಬಳಿ ಇಸ್ರೇಲ್ ಮಿಲಿಟರಿ ನಡೆಸಿದ ದಾಳಿಯಲ್ಲಿ ೫೧ ಕ್ಕೂ ಹೆಚ್ಚು ಜನರು ಮೃತಪಟ್ಟಿದ್ದು, ಸುಮಾರು ೨೦೦ ಮಂದಿ ಗಾಯಗೊಂಡಿರುವ ಬಗ್ಗೆ ವರದಿಯಾಗಿದೆ. ಖಾನ್ ಯೂನಿಸ್ ಪ್ರದೇಶದಲ್ಲಿರುವ ಪರಿಹಾರ ತಾಣದ ಬಳಿ ನೆರೆದಿದ್ದ ಜನರ ಮೇಲೆ ಇಸ್ರೇಲ್ ಪಡೆ ಗುಂಡಿನ ದಾಳಿ ನಡೆಸಿದೆ ಎಂದು ಹಮಾಸ್ ಬೆಂಬಲಿತ ನಾಗರಿಕ ರಕ್ಷಣಾ ಸಂಸ್ಥೆಯೊಂದು ಹೇಳಿಕೊಂಡಿದೆ. ಮಾಧ್ಯಮ ವರದಿಗಳ ಪ್ರಕಾರ ಬಾನಿ ಸುಹೈಲಾ ಪಟ್ಟಣಕ್ಕೆ ಹೋಗುವ ಪ್ರಮುಖ ರಸ್ತೆಯ ಬಳಿ ಈ ಘಟನೆ ಸಂಭವಿಸಿದ್ದು, ಈ ಪ್ರದೇಶದಲ್ಲಿ ಇತ್ತೀಚಿನ ವಾರಗಳಲ್ಲಿ ನಿರಂತರ ಸೇನಾ ಕಾರ್ಯಾಚರಣೆ ನಡೆಯುತ್ತಿದ್ದವು. ಘಟನೆ ಕುರಿತಂತೆ ಇಸ್ರೇಲ್ ಸೇನೆಯಿಂದ ಯಾವುದೇ ಅಧಿಕೃತ ಪ್ರತಿಕ್ರಿಯೆ ಹೊರಬಂದಿಲ್ಲ.

**<><*<><>*><>**

ಅಹಮದಾಬಾದ್ ವಿಮಾನ ದುರಂತಕ್ಕೆ ಸಂಬಂಧಿಸಿದಂತೆ ಸುಮಾರು ೧೬೨ ಸಂತ್ರಸ್ತರ ಡಿಎನ್‌ಎ ಮಾದರಿಗಳನ್ನು ಯಶಸ್ವಿಯಾಗಿ ಹೊಂದಾಣಿಕೆ ಮಾಡಲಾಗಿದೆ. ಸಾಮಾಜಿಕ ಮಾಧ್ಯಮದಲ್ಲಿ ಈ ಕುರಿತು ಮಾಹಿತಿ ನೀಡಿರುವ ಗುಜರಾತ್ ಗೃಹ ಸಚಿವ ಹರ್ಷ್ ಸಾಂಘ್ವಿ, ರಾಜ್ಯ ಸರ್ಕಾರ ಕೇಂದ್ರೀಯ ಸಂಸ್ಥೆಗಳೊಂದಿಗೆ ಜೊತೆಗೂಡಿ ವಿಧಿವಿಜ್ಞಾನ ಮತ್ತು ಕಾನೂನು ಪ್ರಕ್ರಿಯೆಗಳನ್ನು ನಿರ್ವಹಿಸುತ್ತಿದೆ ಎಂದು ಹೇಳಿದ್ದಾರೆ. ಈ ನಡುವೆ ಏರ್ ಇಂಡಿಯಾದ ಅಹಮದಾಬಾದ್‌ನಿಂದ ಲಂಡನ್‌ಗೆ ಹೊಸ ನೀತಿಯೊಂದಿಗೆ ಆರಂಭಗೊಳಿಸಿರುವ ಪ್ರಯಾಣ ವ್ಯವಸ್ಥೆಯನ್ನು ವಿಮಾನದ ಅಲಭ್ಯತೆಯಿಂದ ರದ್ದುಗೊಳಿಸಲಾಗಿದೆ.

**<><*<><>*><>**

ಬೆಳೆಯುತ್ತಿರುವ ಮಾರುಕಟ್ಟೆ ಅಭ್ಯಾಸಗಳಿಗೆ ಅನುಗುಣವಾಗಿ ನಿಯಮಾಧಾರಿತ ಚೌಕಟ್ಟನ್ನು ರೂಪಿಸುವ ಕ್ರಮದ ಭಾಗವಾಗಿ ಭಾರತೀಯ ರಿಸರ್ವ್ ಬ್ಯಾಂಕ್- ಆರ್‌ಬಿಐ, ರೂಪಾಯಿ ಬಡ್ಡಿದರ ಒಪ್ಪಂದ-ಐಆರ್‌ಡಿ ಗಳಲ್ಲಿ ವ್ಯಾಪಾರ ಮಾಡುವ ನಿಯಮಗಳನ್ನು ನವೀಕರಿಸಲು ಕರಡು ಮಾರ್ಗಸೂಚಿಗಳನ್ನು ಬಿಡುಗಡೆ ಮಾಡಿದೆ.

**<><*<><>*><>**

ಐಸಿಸಿ ಮಹಿಳಾ ಏಕದಿನ ಬ್ಯಾಟಿಂಗ್ ಶ್ರೇಯಾಂಕದಲ್ಲಿ, ಭಾರತದ ಸ್ಮೃತಿ ಮಂದಾನಾ ಪುನಃ ಅಗ್ರ ಸ್ಥಾನವನ್ನು ಪಡೆದುಕೊಂಡಿದ್ದಾರೆ.  ೨೦೧೯ರ ನಂತರ ಮೊದಲ ಬಾರಿಗೆ ೨೮ ವರ್ಷದ ಸ್ಮೃತಿ ಮಂದಾನಾ ೭೨೭ ರೇಟಿಂಗ್ ಪಾಯಿಂಟ್‌ಗಳೊಂದಿಗೆ ಅಗ್ರಸ್ಥಾನಕ್ಕೆ ಏರಿದ್ದಾರೆ, ಸ್ಮೃತಿ, ಅಗ್ರ ಸ್ಥಾನಕ್ಕೆ ಏರಿದ ಬೆನ್ನಲ್ಲೇ, ದಕ್ಷಿಣ ಆಫ್ರಿಕಾದ ಲಾರಾ ವೋಲ್ವಾರ್ಡ್ಟ್ ಇಂಗ್ಲೆಂಡ್‌ನ ನ್ಯಾಟ್ ಸ್ಕಿವರ್-ಬ್ರಂಟ್ ಅವರೊಂದಿಗೆ ಜಂಟಿ ಎರಡನೇ ಸ್ಥಾನಕ್ಕೆ ಕುಸಿದಿದ್ದಾರೆ.

**<><*<> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <>*><>**

**<><*<> ನಮ್ಮ ಮುಂದಿನ ವಾರ್ತಾ ಪ್ರಸಾರ ನಾಳೆ ಬೆಳಗ್ಗೆ <>*><>**